ದಿನಾಂಕಃ **17-06-2025** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ **KSRI** ವಕೀಲರಿಂದಃ

ನಾನು ಸುಮಾರು 8 ವರ್ಷದಿಂದ ನ್ಯಾಯಾಲಯಕ್ಕೆ ಬರುತ್ತಿದ್ದೇನೆ. ನನಗೆ ನ್ಯಾಯಾಲಯದ ವ್ಯವಹಾರಗಳೆಲ್ಲವೂ ತಿಳಿದಿದೆ. ಆದ ಕಾರಣ ನಾನು ಯಾರಾದರೂ ಸಾಕ್ಷಿಯಾಗಿ ಕರೆದರೆ ಧಾರಾಳವಾಗಿ ಬರುತ್ತೇನೆ ಎಂದರೆ ಸರಿಯಲ್ಲ. ವಾದಿ ಹಾಗೂ ಪ್ರತಿವಾದಿ ನನ್ನ ಸಂಬಂಧಿಕರಲ್ಲ. ವಾದಿಯು ಈ ದಾವೆಯನ್ನು ಪೂ-ಪ 33 ಅಡಿ , ಉ-ದ 27 ಅಡಿ ವಿಸ್ತೀರ್ಣಕ್ಕೆ ದಾವೆಯನ್ನು ಸಲ್ಲಿಸಿದ್ದಾರೆ. ವಾದಿ ಹಾಗೂ ಪ್ರತಿವಾದಿ ಸ್ವಂತ ಅಣ್ಣ-ತಮ್ಮಂದಿರು. ಅವರಿಬ್ಬರೂ ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದು ಅದರಂತೆ ದಿನಾಂಕ 10-01-1985 ರಲ್ಲಿ ಪಾಲುಪಟ್ಟಿಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸ ರಿ . ಸದರಿ ಪಾಲು ಪಟ್ಟಿಯಲ್ಲಿ ಬರೆದಿರುವ ಎಲ್ಲಾ ವಿಚಾರ ನನಗೆ ಗೊತ್ತು . ಸದರಿ ಪಾಲುಪಟ್ಟಿ ದಾವಾ ಆಸ್ತಿ ಹಾಗೂ ಉಳಿಕೆ 9 ಅಡಿ ಖಾಲಿ ಜಾಗವು ಪ್ರತಿವಾದಿಯ ಹೆಸರಿಗೆ ಎಂದು ಬರೆದಿರುತ್ತದೆ ಎಂದರೆ ಸರಿಯಲ್ಲ. ವಾದಿ - ಪ್ರತಿವಾದಿಗಳ ತಂದೆಯಾದ ಬಸಪ್ಪನವರು ಮತ್ತು ಹುಚ್ಚವೀರಪ್ಪ ನವರು ಸಹೋದರರರು ಎಂದರೆ ಸರಿ . ಸದರಿ ಆಸ್ತಿಯು ಬಸಪ್ಪ ಹಾಗೂ ಹುಚ್ಚವೀರಪ್ಪನವರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ಆದ ಕಾರಣ ದಾವಾ ಆಸ್ತಿಯನ್ನು ಸದರಿ ಪಾಲು ಪಟ್ಟಿಯಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಪಾಲು ಪಟ್ಟಿಯಲ್ಲಿ ಸೇರಿಸಿರುವ ಸಂಗತಿಯೇ

ನನಗೆ ತಿಳಿದಿಲ್ಲ. ಈ ದಾವಾ ಆಸ್ತಿಯು ಹುಚ್ಚ ವೀರಪ್ಪನವರ ಭಾಗಕ್ಕೆ ಬಂದಿದ್ದು ಅವರಿಂದ ವಾದಿಯು ಖರೀದಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ . ದಾವಾ ಆಸ್ತಿಯು ಮೂಲತಃ ಪಿತ್ರಾರ್ಜಿತ ಆಸ್ತಿಯಾಗಿದ್ದು ಯಾವುದೋ ಒಂದು ಕಾರಣದಿಂದ ಹುಚ್ಚವೀರಪ್ಪನವರಿಗೆ ಸೇರಿರುತ್ತದೆ ಅವರಿಂದ ವಾದಿಯು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 10-01-1985 ರ ಪಾಲುಪಟ್ಟಿಯಲ್ಲಿ ಬರೆದಿರುವ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ . ಸದರಿ ವಾದಿ ಮತ್ತು ಪ್ರತಿವಾದಿಯರು ಯಾವ ಕಾರಣಕ್ಕೆ ವಿಭಾಗ ಮಾಡಿಕೊಂಡರು ಎಂದರೆ ನನಗೆ ತಿಳಿದಿಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ವಾದಿಯ ಮನೆ ಇದೆ ಎಂದರೆ ಸರಿ .

ನನ್ನ ಪ್ರಮಾಣಪತ್ರದಲ್ಲಿ ದಾವಾ ಆಸ್ತಿಯ ಉತ್ತರ ದಿಕ್ಕಿಗೆ ನನ್ನ ಆಸ್ತಿ ಇದೆ ಎಂದು ನಮೂದಾಗಿರುವುದು ಸರಿಯಲ್ಲ. ಅದೇ ರೀತಿ ಸದರಿ ಪ್ರಮಾಣಪತ್ರದಲ್ಲಿ ವಾದಿಯು ಉತ್ತರ ದಿಕ್ಕಿಗೆ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ ಎಂದು ಬರೆದಿರುವುದು ಸಹ ಸುಳ್ಳು . ನನಗೆ ಈ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಅನೇಕ ಬಾರಿ ನ್ಯಾಯಾಲಯಕ್ಕ್ಕೆ ಬಂದು ಹೋಗುತ್ತಿರುವ ಕಾರಣ ಸಾಕ್ಷಿಯನ್ನು ಹೇಳಲು ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯು ಅವರ ಕುಟುಂಬದ ವಿಭಾಗದಂತೆ ಪ್ರತಿವಾದಿಗೆ ಬಂದು ಅವರು ಹಕ್ಕು ಮತ್ತು ಸ್ವಾದೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.